| ತೆರಿಗೆ ಉಳಿಸಲು ಯಾವುದು ಬೆಸ್ಟ್? | |
|---|---|
| (ಹಳೆಯ ತೆರಿಗೆ ಪಾವತಿ ಪದ್ಧತಿ ಆಯ್ಕೆ ಮಾಡುವವರಿಗೆ) | |
| ಯೋಜನೆಗಳು | 3ರಿಂದ 5 ವರ್ಷಗಳಲ್ಲಿನ ಗಳಿಕೆ |
| ಎನ್‌ಪಿಎಸ್ | 8%–11% |
| ಯುಲಿಪ್ಸ್ | 8%–9% |
| ಇಎಲ್‌ಎಸ್‌ಎಸ್ ಫಂಡ್ಸ್ | 10.01% |
| ಹಿರಿಯ ನಾಗರಿಕರ ಉಳಿತಾಯ ಯೋಜನೆ | 7%–8% |
| ರಿಟೈರ್‌ಮೆಂಟ್ ಫಂಡ್ಸ್ | 7%–13% |
| ಪಿಪಿಎಫ್ | 7.1% |
| ಸುಕನ್ಯಾ ಸಮೃದ್ಧಿ | 7.6% |
| ಎನ್‌ಎಸ್‌ಸಿ/ತೆರಿಗೆ ಉಳಿಸುವ ಎಫ್‌ಡಿ | 7% |
| ಜೀವ ವಿಮಾ ಪಾಲಿಸಿಗಳು | 5%–6% |







50 ಸಾವಿರ ರೂ.ಗಳ ಸ್ಟ್ಯಾಂಡರ್ಡ್ ಡಿಡಕ್ಷನ್ ಸೌಲಭ್ಯವನ್ನೂ ನೀಡಲಾಗಿದೆ. ಅಂದರೆ, ಒಬ್ಬ ವ್ಯಕ್ತಿಯು ಸಂಪಾದಿಸುವ 7.50 ಲಕ್ಷ ರೂ. ಆದಾಯಕ್ಕೆ ಒಂದು ರೂಪಾಯಿ ಸಹ ತೆರಿಗೆ ಕಟ್ಟುವ ಅಗತ್ಯವಿಲ್ಲ. ಹಳೆಯ ತೆರಿಗೆ ಪಾವತಿ ಪದ್ಧತಿದಾರರು ಹೊಂದಿಸಿಕೊಳ್ಳುವಂತೆ ಎಲ್‌ಐಸಿ ರಸೀದಿ, ಮಕ್ಕಳ ಸ್ಕೂಲ್‌ಬಿಲ್‌ಗಳು ಸೇರಿದಂತೆ ಯಾವುದೇ ದಾಖಲೆಯನ್ನೂ ನೀಡುವ ರಗಳೆ ಇಲ್ಲ. 'ಅರೆ, ಇದು ಬಹಳ ಚೆನ್ನಾಗಿದೆಯಲ್ಲ' ಎಂದು ಅನ್ನಿಸಬಹುದು. ಆದರೆ, ಇಲ್ಲೊಂದು ಸೂಕ್ಷ್ಮವಿದೆ. ತೆರಿಗೆ ಆದಾಯವು 7.50 ಲಕ್ಷ ರೂಪಾಯಿ ದಾಟಿದರೆ, ಕೇವಲ 1 ರೂಪಾಯಿ ಜಾಸ್ತಿಯಾದರೂ, 25 ಸಾವಿರ ರೂ. ತೆರಿಗೆ ಕಟ್ಟಬೇಕಾಗುತ್ತದೆ!

ನಿಮ್ಮ ಆದಾಯ 7 ಲಕ್ಷ ರೂ. ದಾಟಿದ ತಕ್ಷಣ 3 ಲಕ್ಷ ರೂ. ಮಿತಿಗಿಂತ ಹೆಚ್ಚಿನ ಎಲ್ಲ ಆದಾಯಕ್ಕೂ ತೆರಿಗೆ ಅನ್ವಯವಾಗುತ್ತದೆ. ಒಂದು ವೇಳೆ ಆದಾಯವು 8 ಲಕ್ಷ ರೂ. ಇದ್ದರೆ, ಮೊದಲಿನ 3 ಲಕ್ಷ ರೂ.ಗೆ ಯಾವುದೇ ತೆರಿಗೆ ಇರುವುದಿಲ್ಲ. ನಂತರದ 3ರಿಂದ 6 ಲಕ್ಷ ರೂ.ಗೆ ಶೇ.5 ಮತ್ತು 6ರಿಂದ 9 ಲಕ್ಷ ರೂ.ಗೆ ಶೇ.10ರ ತೆರಿಗೆ ಅನ್ವಯವಾಗುತ್ತದೆ. ಇಲ್ಲಿ ವಿಮೆ, ಹೋಮ್‌ಲೋನ್ ಅಥವಾ ಉಳಿತಾಯ ಯೋಜನೆಗಳೂ ಸೇರಿದಂತೆ ಯಾವುದೇ ದಾಖಲೆಗಳನ್ನು ನೀಡಿ ತೆರಿಗೆ ವಿನಾಯಿತಿ ಪಡೆಯುವ ಅವಕಾಶವಿಲ್ಲ. "ನಮ್ಮ ಉಳಿತಾಯಗಳಿಗೆ ಸರ್ಕಾರ ನೀಡುವ ಯಾವುದೇ

## ವಿಚಿತ್ರ ತೆರಿಗೆಗಳ ಕಾಲ, ಈಗಲೇ ಪರವಾಗಿಲ್ಲ!

ತೆರಿಗೆ ಅನ್ನುವುದು ಯಾವತ್ತಿಗೂ ಜನರಿಗೆ ಹಿಂಸೆಯಾಗುವಂತೆ ಇರಬಾರದು. "ಗೋವಿನಿಂದ ಹಾಲನ್ನು ಹೀರಬೇಕೇ ಹೊರತು ರಕ್ತವನ್ನಲ್ಲ. ಹಾಲನ್ನು ಕರೆದರೆ ಹಸುವಿಗೆ ಹೇಗೆ ತೊಂದರೆಯಾಗುವುದಿಲ್ಲವೋ, ಆ ರೀತಿಯಲ್ಲಿಯೇ ತೆರಿಗೆಯು ಜನರಿಗೆ ಹೊರೆ ಅನ್ನಿಸಬಾರದು. ದುಂಬಿಯು ಹೂವಿನಿಂದ ಮಕರಂದ ಹೀರಿದಂತೆ ತೆರಿಗೆ ವ್ಯವಸ್ಥೆ ಇರಬೇಕು" ಎಂದು ತೆರಿಗೆ ಮಾದರಿಯನ್ನು ಕೌಟಿಲ್ಯ ಈ ಹಿಂದೆಯೇ ಹೇಳಿದ್ದಾನೆ. "ಮಂಜು ಕರಗುವುದು ಹೇಗೆ ಅರಿವಿಗೆ ಬರುವುದಿಲ್ಲವೋ ಅದೇ ರೀತಿ ಜನರಿಗೆ ತೊಂದರೆಯಾಗದಂತೆ ತೆರಿಗೆ ಸಂಗ್ರಹಿಸಬೇಕು" ಎಂದು 'ಶಿವತತ್ವ ರತ್ನಾಗರ' ಕೃತಿಯಲ್ಲಿ ಹೇಳಲಾಗಿದೆ. ಆದರೆ, ತೆರಿಗೆಗಳು ಇಂದು ಜನಸಾಮಾನ್ಯರನ್ನು ಸುಸ್ತು ಮಾಡುತ್ತಿವೆ.

ರಸ್ತೆ, ಸೇತುವೆ, ಶಿಕ್ಷಣ, ಮೂಲ ಸೌಕರ್ಯ ವೃದ್ಧಿ, ಅಧಿಕಾರಿಗಳಿಗೆ ವೇತನ, ರಕ್ಷಣೆ ಸೇರಿದಂತೆ ನಾನಾ ಜವಾಬ್ದಾರಿಗಳನ್ನು ನಿರ್ವಹಿಸಲು ಸರ್ಕಾರಕ್ಕೆ ಹಣ ಬೇಕು. ಇದಕ್ಕಾಗಿ ತೆರಿಗೆಗಳನ್ನೇ ಬಹುಮುಖ್ಯವಾಗಿ ಸರ್ಕಾರಗಳು ಮತ್ತು ಆಡಳಿತ ವ್ಯವಸ್ಥೆಗಳು ನೆಚ್ಚಿಕೊಂಡಿವೆ. ಪ್ರಸ್ತುತ ಅರ್ಧ ಕಾಫಿ ಕುಡಿದರೂ ಜಿಎಸ್‌ಟಿ ಪಾವತಿಸಬೇಕು! ಪ್ರತಿಯೊಂದು ಸರಕು–ಸೇವೆಗಳಿಗೂ ತೆರಿಗೆ ಕಟ್ಟುವ ಜನರು, ತಮ್ಮ ಆದಾಯಕ್ಕೂ ತೆರಿಗೆ ತೆರಬೇಕು. ತೆರಿಗೆ ತಲೆನೋವು ಇಂದಿಗಷ್ಟೇ ಸೀಮಿತವಲ್ಲ. ಗಡ್ಡ ಬಿಟ್ಟವರಿಗೂ ತೆರಿಗೆ ಹಾಕಿದ ಉದಾಹರಣೆಗಳು